# ಯಾರು ದೇವಿ ಭಗವತಿಯೋ, ಅವರೇ ಶಾರದಾ, ಸರಸ್ವತಿ –೨

ಸ್ವಾಮಿ ಚೇತನಾನಂದ

(ಹಿಂದಿನ ಸಂಚಿಕೆಯಿಂದ ಮುಂದುವರಿದುದು)

'ಶ್ರೀದುರ್ಗಾಸಪ್ತಶತಿ' ಅಥವಾ 'ಶ್ರೀಚಂಡಿ'ಯ ಬೆಳಕಿನಲ್ಲಿ ಶ್ರೀಶಾರದಾದೇವಿಯವರ ದೈವೀರೂಪವನ್ನು ತಿಳಿಯಲು ಪ್ರಯತ್ನಿಸೋಣ. ಶ್ರೀಚಂಡಿಯ ಪಂಚಮ ಅಧ್ಯಾಯದಲ್ಲಿ ಶುಂಭ–ನಿಶುಂಭರ ('ಅಹಂ' ಮತ್ತು 'ಮಮ'ಗಳ ಪ್ರತೀಕ) ವಧೆಗಾಗಿ ದೇವತೆಗಳು ದೇವಿಯನ್ನು ಸ್ತುತಿಸಲಾರಂಭಿಸಿದರು. ಗ್ರಂಥದಲ್ಲಿ ೧೪ರಿಂದ ೮೦ನೇ ಮಂತ್ರಗಳವರೆಗೆ ದೇವಿಯ ೨೩ ರೂಪಗಳನ್ನು ವರ್ಣಿಸಲಾಗಿದೆ. ನಮ್ಮ ದೇಶದ ಆಬಾಲ ವೃದ್ಧರ ಬಾಯಿಯಲ್ಲೂ **ಯಾ ದೇವೀ ಸರ್ವಭೂತೇಷು. ನಮಸ್ತಸ್ಯೈ ನಮಸ್ತಸ್ಯೈ ನಮೋ ನಮಃ** ಎಂಬ ಮಂತ್ರವನ್ನು ಕೇಳಬಹುದು. ಮೊದಲನೆಯ **ನಮಸ್ತಸ್ಯೈ** ಪದದಿಂದ ದೇವಿಯ ಸ್ಥೂಲರೂಪವನ್ನು, ಎರಡನೆಯ ಪದದಿಂದ ಸೂಕ್ಷ್ಮ ರೂಪವನ್ನು, ಮೂರನೆಯ ಪದದಿಂದ ಕಾರಣರೂಪವನ್ನೂ, ಮತ್ತು **ನಮೋ ನಮಃ** ಎಂಬ ಪದದಿಂದ ದೇವಿಯ ಕಾರಣಾತೀತವಾದ ಪ್ರಕೃತಿಗೆ ಪ್ರಣಾಮ ಮಾಡಲಾಗಿರುವುದು. ಈ ಹಲವು ಪ್ರಣಾಮಗಳು ಏಕೆ? ಅಹಂಕಾರವೇ ಮೂಲ ಅಸುರ ಎಂದು ಶಾಸ್ತ್ರಗಳಲ್ಲಿ ಹೇಳಲ್ಪಟ್ಟಿರುವುದು. ಈ ಅಸುರನನ್ನು ಸಂಹಾರ ಮಾಡಲು ಇರುವುದು ಒಂದೇ ಒಂದು ಅಸ್ತ್ರ. ಅದೇ **ನಮಃ** ಅರ್ಥಾತ್ **ನ ಮಮ**—'ನನ್ನದಲ್ಲ' 'ಎಲ್ಲ ನೀನೇ, ತಾಯಿ' ಎಂದು. ಹೀಗೆ ಅಹಂಕಾರವನ್ನು ನಾಶ ಪಡಿಸುವುದರಿಂದ ದೇವಿಯು ಭಕ್ತನ ಹೃದಯದಲ್ಲಿ ಆವಿರ್ಭವಿಸುವಳು.

## ಯಾ ದೇವೀ ಸರ್ವಭೂತೇಷು ವಿಷ್ಣುಮಾಯೇತಿ ಶಬ್ದಿತಾ:

**ವಿಷ್ಣುಮಾಯಾ** ಎಂದರೆ ಭಗವತಿ, ಮಹಾಮಾಯೆ. ಈ ಮಹಾಶಕ್ತಿಯನ್ನು ಆಧಾರವಾಗಿಟ್ಟುಕೊಂಡೇ ಈಶ್ವರನು ಸೃಷ್ಟಿ, ಸ್ಥಿತಿ, ಲಯಗಳನ್ನು ಮಾಡುವುದು. ಶ್ರೀಶಾರದಾದೇವಿಯವರು ಚಂಡಿಯಲ್ಲಿ ವರ್ಣಿಸಲ್ಪಟ್ಟಿರುವ ವಿಷ್ಣುಮಾಯೆಯೇ ಆಗಿದ್ದರು. ಅವರು ಸ್ವತಃ ಮಾಯೆಯನ್ನು ಸ್ವೀಕರಿಸಿ ಈ ಜಗತ್ತಿನಲ್ಲಿ ಲೀಲೆಯನ್ನು ಮಾಡಿಹೋಗಿರುವರು. ತಮ್ಮನಾದ ಅಭಯನು (ರಾಧುವಿನ ತಂದೆ) ತೀರಿಕೊಂಡಾಗ ಅವನ ಹೆಂಡತಿ ಹುಚ್ಚಿಯಾದಳು. ಪತಿಯ ನಿರ್ಯಾಣಾನಂತರ ಶ್ರೀಮಾತೆ ದೇಹತ್ಯಾಗ ಮಾಡಲು ಬಯಸಿದಾಗ, ಶ್ರೀರಾಮಕೃಷ್ಣರು ಅವರಿಗೆ ದರ್ಶನ ನೀಡಿ ರಾಧುವನ್ನು ತೋರಿ "ನೀನು ಇವಳನ್ನು ಆಶ್ರಯಿಸಿ ಇರು. ಇವಳು ಯೋಗಮಾಯೆ" ಎಂದರು. ಒಮ್ಮೆ ವಿಶ್ವೇಶ್ವರಾನಂದರು ಶ್ರೀಮಾತೆಯವರನ್ನು ಕೇಳಿದರು, "ಅಮ್ಮ, ನಿಮಗೆ ಯಾಕೆ ಇವಳ ಮೇಲೆ ಇಷ್ಟೊಂದು ಆಸಕ್ತಿ? ಘೋರ ಸಂಸಾರಿಯ ಹಾಗೆ ಸದಾ 'ರಾಧಿ, ರಾಧಿ' ಎನ್ನುತಿರುತ್ತೀರಿ!" "ನಿನಗೆ ನನ್ನಂತಿರುವವರು ಎಲ್ಲಿಯಾದರೂ ಸಿಕ್ಕುವರೇನು? ಹುಡುಕಿ ನೋಡು, ದೊರಕುವುದೋ ಎಂದು. ನಿನಗೆ ಗೊತ್ತೇನು? ಯಾರು ಪರಮಾರ್ಥವನ್ನು ಸದಾ ಚಿಂತಿಸುವರೋ ಅಂತಹವರ ಮನಸ್ಸು ಅತಿ ಸೂಕ್ಷ್ಮ ಮತ್ತು ಪರಿಶುದ್ಧವಾಗುವುದು. ಅಂತಹ ಮನಸ್ಸು ಯಾವುದನ್ನೇ ಹಿಡಿದರೂ ಅದನ್ನು ಭದ್ರವಾಗಿ ಹಿಡಿಯುವುದು. ಆದುದರಿಂದಲೇ ಆಸಕ್ತಿ ಇರುವಲ್ಲಿ ಮನಸ್ಸು ನಿಲ್ಲುವುದು" ಎಂದು ಶ್ರೀಮಾತೆ ವಿವರಿಸಿದರು. ಮತ್ತೊಬ್ಬರು, "ತಾಯಿ, ನಿಮಗೆ ನಿಮ್ಮ ನಿಜಸ್ವರೂಪ ಜ್ಞಾಪಕಕ್ಕೆ ಬರುವುದಿಲ್ಲವೇ?" ಎಂದು ಕೇಳಿದಾಗ "ಹೌದು, ಒಂದೊಂದು ಸಲ ನೆನಪಿಗೆ ಬರುವುದು. ಆಗ ನಾನು ಯೋಚಿಸುವೆನು, 'ಓಹ್, ನಾನು ಏನು ಮಾಡುತ್ತಿದ್ದೇನೆ?' ಎಂದು. ಆಗ ಈ ಮನೆ, ಮಕ್ಕಳು, ಬಂಧುಗಳು, ಎಲ್ಲ ಇದ್ದರೂ ಮರೆತೇಹೋಗುವುದು. ಕೆಲಸ ಕಾರ್ಯಗಳ ಮಧ್ಯದಲ್ಲೂ ಸಹ ಲೇಶಮಾತ್ರ ಬಯಸಿದರೆ ಥಟ್ಟನೆ ಮನಸ್ಸು ಮೇಲೇರಿ, ಮಹಾಮಾಯೆಯ ಲೀಲೆಯು ಅರ್ಥವಾಗುವುದು. ಶ್ರೀರಾಮಕೃಷ್ಣರು ಹೇಳಿರುವರು, ನರಲೀಲೆಯಲ್ಲಿ ಅವತಾರಾದಿಗಳಿಗೂ ಸಹ ಸಾಧಾರಣ ಮನುಷ್ಯರ ಹಾಗೆ ಎಲ್ಲ ಆಚರಣೆಗಳನ್ನು ಮಾಡಲೇಬೇಕು ಎಂದು. ಅದುದರಿಂದಲೇ ಅವತಾರಗಳನ್ನು ಗುರುತಿಸುವುದು ಕಠಿಣ" ಎಂದರು.

ಮಾಕುವಿನ ಮಗ ನ್ಯಾಡನ ಮರಣವಾದಾಗ ಶ್ರೀಮಾತೆಯವರು ರೋದಿಸುವುದನ್ನು ನೋಡಿ ಅಲ್ಲಿದ್ದ ನಾರಾಯಣ ಅಯ್ಯಂಗಾರರು ಆಶ್ಚರ್ಯಚಕಿತರಾಗಿ "ತಾಯಿ, ತಾವು ಈ ನ್ಯಾಡನ ಸಾವಿನಿಂದ ಸಾಧಾರಣ ಹೆಂಗಸಿನ ಹಾಗೆ ದುಃಖ ಪಡುವುದೇಕೆ?" ಎಂದು ಕೇಳಿದಾಗ, 'ಮಗು, ನಾನು ಸಂಸಾರದಲ್ಲಿರುವೆನು. ಸಂಸಾರವೃಕ್ಷದ ಫಲಗಳನ್ನು ಅನುಭವಿಸಲೇಬೇಕು. ಅದಕ್ಕಾಗಿಯೇ ಈ ರೋದನ" ಎಂದು ವಿವರಣೆಯಿತ್ತರು. ಮತ್ತೊಮ್ಮೆ ಭಕ್ತ ಮಹಿಳೆಯೋರ್ವಳು, ರಾಧುವಿನೊಡನೆ ಶ್ರೀಮಾತೆಯವರಿಗೆ ಇರುವ ಮಮತೆಯನ್ನು ಕಂಡು ಟೀಕಿಸಿದಳು, "ಅಮ್ಮ, ನೀವೂ ಮಾಯೆಯ ಬಲೆಯಲ್ಲಿ ಬಂಧಿತರು" ಎಂದು. ಅದಕ್ಕೆ ಶ್ರೀಮಾತೆ, "ಏನು ಮಾಡಲಿ ಹೇಳು ಮಗು? ನಾನೇ ಸ್ವತಃ ಮಾಯೆಯಾಗಿರುವೆನು" ಎಂದರು.

### ಯಾ ದೇವೀ ಸರ್ವಭೂತೇಷು ಚೇತನೇತ್ಯಭಿಧೀಯತೇ :

**ಚೇತನಾ** ಎಂದರೆ ಅಂತಃಕರಣ ವೃತ್ತಿ, ಜ್ಞಾನಸ್ವರೂಪದ ಮನೋವೃತ್ತಿ. ಸೂಕ್ಷ್ಮವಾದ ಪ್ರಾಣಶಕ್ತಿ ರೂಪದಿಂದ ಮತ್ತು ಕಾರಣಶರೀರದಲ್ಲಿ ಅವ್ಯಕ್ತ ಬೀಜರೂಪದಲ್ಲೆಲ್ಲ ಜೀವಿಗಳಲ್ಲೂ ಅವಸ್ಥಿತಳಾಗಿರುವ ದೇವಿಯು ಚೈತನ್ಯರೂಪಿಣಿ. **ಶಾರದೇ ಜ್ಞಾನ ದಾಯಿಕೇ:** ಶ್ರೀಮಾತೆಯವರು ಧೀಮತಿಯೂ, ವಿದ್ಯಾ ರೂಪಿಣಿಯೂ ಹಾಗೂ ಜ್ಞಾನದಾಯಿನಿಯೂ ಆಗಿದ್ದರು. ಅನೇಕಾನೇಕ ನರನಾರಿಯರಿಗೆ ಮಂತ್ರದೀಕ್ಷೆ ಹಾಗೂ ಉಪದೇಶಗಳನ್ನು ನೀಡುವ ಮೂಲಕ ಸುಪ್ತವಾಗಿರುವ ಚೈತನ್ಯವನ್ನು ಅವರು ಜಾಗೃತಗೊಳಿಸಿರುವರು. ಶಾಸ್ತ್ರಗಳಲ್ಲಿ ಜ್ಞಾನದಿಂದಲೇ ಮುಕ್ತಿ ಎಂದು ಹೇಳಿದೆ. ಶ್ರೀಮಾತೆಯವರು ಅನೇಕ ಅಂತರಂಗದ ಶಿಷ್ಯರಿಗೆ "ನಿಮ್ಮಲ್ಲಿ ಜ್ಞಾನ ಚೈತನ್ಯಗಳು ಜಾಗೃತವಾಗಲಿ" ಎಂದು ಹರಸಿರುವರು.

### ಯಾ ದೇವೀ ಸರ್ವಭೂತೇಷು ಬುದ್ಧಿರೂಪೇಣ ಸಂಸ್ಥಿತಾ:

ಬುದ್ಧಿ ಎಂಬ ಪದಕ್ಕೆ ಮತಿ, ಪ್ರಜ್ಞೆ, ವಿವೇಚನಾಶಕ್ತಿ, ವಿಚಾರಶಕ್ತಿ, ನಿಶ್ಚಯಾತ್ಮಿಕಾ ಬುದ್ಧಿ, ಅಂತಃಕರಣ ವೃತ್ತಿ ಎಂಬ ಅರ್ಥಗಳಿವೆ. ದೇವಿಯು ಬುದ್ಧಿರೂಪಿಣಿ. ಪ್ರತಿಯೊಂದು ಜೀವಿಯಲ್ಲಿಯೂ, ಬುದ್ಧಿಯ ರೂಪದಲ್ಲಿ ಅವಸ್ಥಿತಳಾಗಿರುವಳು. ಶ್ರೀಮಾತೆಯವರು ನಮ್ಮಂತೆ ಶಾಲೆಗೆ ಹೋಗಿ ಓದು ಬರಹಗಳನ್ನು ಕಲಿಯಲಿಲ್ಲ. ಆದರೂ ಅವರು ಅಸಾಧಾರಣ ಬುದ್ಧಿಮತಿಯಾಗಿದ್ದರು. ಪಾಣಿಹಾಟಿ ಉತ್ಸವಕ್ಕೆ ಶ್ರೀಮಾತೆಯವರು ತಮ್ಮ ಸಂಗಡ ಹೋಗದೆ ಹಿಂದೆ ನಿಂತದ್ದನ್ನು ಕುರಿತು ರಾಮಕೃಷ್ಣರೇ ಪ್ರಶಂಸಿಸಿದರು: "ಅವಳು ಬರದೇ ಇದ್ದದ್ದೇ ಒಳ್ಳೆಯದಾಯಿತು. 'ಹಂಸ ಹಂಸಿ'ಗಳು ಬಂದಿವೆ ಎಂದು ಜನ ಹಾಸ್ಯ ಮಾಡುತ್ತಿದ್ದರು. ಅವಳು ತುಂಬಾ ಬುದ್ಧಿವಂತೆ." ಎಂದು. ಮತ್ತೊಮ್ಮೆ ಮಾರ ವಾಡಿ ಭಕ್ತನೊಬ್ಬನು ಹತ್ತುಸಾವಿರ ರೂಪಾಯಿಗಳನ್ನು ಸ್ವೀಕರಿಸಬೇಕೆಂದು ಶ್ರೀರಾಮಕೃಷ್ಣರನ್ನು ಒತ್ತಾಯಪಡಿಸಿದಾಗ ಅವರು ಅದನ್ನು ನಿರಾಕರಿಸಿ ಶ್ರೀಮಾತೆಯವರ ಮನಃಸ್ಥಿಯನ್ನು ತಿಳಿಯಲು "ನೋಡು ಇವನು ಹಣ ನೀಡಲು ಇಚ್ಛಿಸುವನು. ನೀನು ತೆಗೆದುಕೊಳ್ಳುವೆ ಏನು?" ಎಂದು ಕೇಳಿದರು. ತಕ್ಷಣವೇ ಶ್ರೀಮಾತೆ, "ಅದು ಹೇಗಾಗುವುದು? ನಾನು ಸ್ವೀಕರಿಸಿದರೂ ಅದನ್ನು ನಿಮ್ಮ ಸೇವೆಗಷ್ಟೇ ಉಪಯೋಗಿಸಲಾಗುವುದು. ಜನ ನಿಮ್ಮ ತ್ಯಾಗ ಬುದ್ಧಿಗಾಗಿ ನಿಮ್ಮಲ್ಲಿ ಶ್ರದ್ಧಾಭಕ್ತಿ ತೋರುವರು. ಆದುದರಿಂದ ಹಣವನ್ನು ಸ್ವೀಕರಿಸಲು ಸಾಧ್ಯವೇ ಇಲ್ಲ" ಎಂದು ತಮ್ಮ ಖಚಿತ ನಿರ್ಧಾರವನ್ನು ತಿಳಿಸಿದರು. ಈ ನಿರ್ಧಾರವನ್ನು ಕೇಳಿ ಶ್ರೀರಾಮಕೃಷ್ಣರು ಬದುಕಿದೆ ಎಂದು ನಿಟ್ಟುಸಿರುಬಿಟ್ಟರು.

### ಯಾ ದೇವೀ ಸರ್ವಭೂತೇಷು ನಿದ್ರಾರೂಪೇಣ ಸಂಸ್ಥಿತಾ :

ನಿದ್ರೆಯಿಲ್ಲದೆ ಮನುಷ್ಯ ಬದುಕಲಾರ. ದೇವಿಯು ತನ್ನ ಸಂತಾನಗಳನ್ನು ಸುಷುಪ್ತಿಯಲ್ಲಿರಿಸಿ, ಇಂದ್ರಿಯಜನಿತವಾದ ಕರ್ಮಶ್ರಮದಿಂದ ವಿಶ್ರಾಂತಿ ನೀಡುವಳು. ನಿದ್ರಾರೂಪಿಣಿಯು ಕೃಪೆ ಮಾಡಿ, ಜೀವಿಗೆ ರೋಗ, ಶೋಕ, ತಾಪ, ನೋವುಗಳಿಂದ ತಾತ್ಕಾಲಿಕವಾಗಿ ಶಾಂತಿ ನೀಡುವಳು. ಚಂಡಿಯಲ್ಲಿ ಹೇಳಿರುವಂತೆ, ಈ ಮಹಾಮಾಯೆಯೇ ಸೃಷ್ಟಿಗೆ ಮೂಲನಾದ ವಿಷ್ಣುವಿನ ಯೋಗನಿದ್ರೆಯಾಗಿ, ಸಕಲ ಜಗತ್ತನ್ನೂ ಈ ಶಕ್ತಿಯಿಂದ ಮೋಹದಲ್ಲಿ ಇರಿಸಿದ್ದಾಳೆ.

ಒಮ್ಮೆ ಶ್ರೀರಾಮಕೃಷ್ಣರು ಲಾಟುವನ್ನು ಕೇಳಿದರು: "ಓ ಲೇಟೋ, ನಿನಗೇನಾದರೂ ಗೊತ್ತೇನು? ಭಗವಂತನು ನಿದ್ದೆ ಮಾಡುವನೇ?" ಅದಕ್ಕೆ ಲಾಟು "ನನಗೆ ಗೊತ್ತಿಲ್ಲ" ಎಂದಾಗ, "ನೋಡು ಎಲ್ಲರೂ ನಿದ್ದೆ ಮಾಡುವರು. ಸಕಲ ಜಗತ್ತೂ ನಿದ್ರೆಗೆ ಅಧೀನ. ಆದರೆ ಭಗವಂತನಿಗೆ ನಿದ್ದೆ ಮಾಡಲಾಗುವುದಿಲ್ಲ. ಅವನು ನಿದ್ರೆ ಮಾಡಿದರೆ ಜಗತ್ತಿನಲ್ಲಿ ಅಂಧಕಾರವಾಗಿ ಮಹಾಪ್ರಳಯವಾಗುವುದು. ಹಗಲೂ ರಾತ್ರಿ ಆತನು ಎಚ್ಚರದಿಂದ ಇದ್ದು ಜೀವಜಂತುಗಳ ಸೇವೆ ಮಾಡುವನು. ಆದುದರಿಂದಲೇ ಜೀವಜಂತುಗಳು ನಿರ್ಭಯರಾಗಿ ನಿದ್ರೆ ಮಾಡಲು ಸಾಧ್ಯವಾಗಿರುವುದು" ಎಂದು ವಿವರಿಸಿದರು.

ಮಹಾಮಾಯೆ ಶಾರದಾದೇವಿಯವರೂ ಸಹ ವಿಶ್ರಾಮವಿಲ್ಲದೆ ಪತಿಯ ಹಾಗೂ ಭಕ್ತರ ಸೇವೆ ಮಾಡುತ್ತಿದ್ದರು. ಸಾಧಕನು ಆಧ್ಯಾತ್ಮಿಕವಾಗಿ ಮುಂದುವರಿಯಲು ತಮಸ್ಸಿನ ಸಂಕೇತವಾದ ನಿದ್ರೆಯನ್ನು ಜಯಿಸಬೇಕು. ಶಾಂತವಾದ ಮನಸ್ಸಿಗೆ ಹೆಚ್ಚು ನಿದ್ರೆಯ ಆವಶ್ಯಕತೆಯೂ ಇರುವುದಿಲ್ಲ.

### ಯಾ ದೇವೀ ಸರ್ವಭೂತೇಷು ಕ್ಷುಧಾರೂಪೇಣ ಸಂಸ್ಥಿತಾ :

**ಕ್ಷುಧಾ** ಎಂದರೆ ಹಸಿವು. ನಮ್ಮ ಸ್ಥೂಲಶರೀರದಲ್ಲಿ ರಸರಕ್ತಾದಿ ಧಾತುಗಳ ಕ್ರಿಯೆಯಿಂದ ಉಂಟಾಗುವ ಹಸಿವನ್ನು ದೂರ ಮಾಡಲು ಆಹಾರ ಬೇಕಾಗುವುದು. ಶರೀರವನ್ನು ಹಿಡಿದಿಡುವುದೇ ಆಹಾರ. ದೇವಿಯಲ್ಲಿ ಶರಣಾದರೆ ಜೀವಿಯು ಭವಕ್ಷುಧೆಯಿಂದ ದೂರವಾಗಬಲ್ಲ. ಕ್ಷುಧಾರೂಪದಲ್ಲಿ ದೇವಿಯು ಜೀವಿಗಳ ಅಂತರಂಗದಲ್ಲಿ ವಾಸಮಾಡುತ್ತಿರುವಳು. ಶ್ರೀಮಾತೆಯವರು ಸದಾ, ತಮ್ಮ ಮಕ್ಕಳಿಗೆ ಬಡಿಸಿ ಉಣಿಸುವುದರಲ್ಲಿ ಅದೆಷ್ಟು ಆಸಕ್ತರಾಗಿದ್ದರು! ಅದಕ್ಕಾಗಿ ಹಲವು ಕಡೆಗಳಿಂದ ಸಾಮಗ್ರಿಗಳನ್ನು ತಂದು, ತಾವೇ ಸ್ವತಃ ಅಡುಗೆ ಮಾಡಿ ಸಾಧುಗಳಿಗೆ ಹಾಗೂ ಭಕ್ತರಿಗೆ ಬಡಿಸುತ್ತಿದ್ದರು. 'ಮಗು, ಇನ್ನೂ ಸ್ವಲ್ಪ ತಿನ್ನು" ಎಂದು ಪ್ರೀತಿಯಿಂದ ತಿನ್ನಿಸುತ್ತಿದ್ದರು. ಸ್ವಾಮಿ ವಿರಜಾನಂದರು ಹೇಳುತ್ತಿದ್ದರು, "ಶ್ರೀಮಾತೆಯವರು ಎರಡು ವೇಳೆಯೂ ಕಷ್ಟಪಟ್ಟು ಸ್ವತಃ ಅಡುಗೆ ಮಾಡಿ, ನಮ್ಮನ್ನು ಕೂಡಿಸಿ ಊಟಬಡಿಸಿ ಬಲವಂತ ಮಾಡಿ ತಿನ್ನಿಸುತ್ತಿದ್ದರು. ಅವಾದರೋ ಅಮೃತಸಮಾನವಾದ ಖಾದ್ಯಗಳಾಗಿದ್ದವು.

ಅಂತಹ ರುಚಿಕರವಾದದ್ದನ್ನು ನಾನು ಎಲ್ಲಿಯೂ ತಿಂದಿರಲಿಲ್ಲ."

### ಯಾ ದೇವೀ ಸರ್ವಭೂತೇಷು ಛಾಯಾರೂಪೇಣ ಸಂಸ್ಥಿತಾ:

ಛಾಯಾ ಪದದ ಒಂದು ಅರ್ಥ ಜೀವಿ ಎಂದು. ಪರಬ್ರಹ್ಮವೇ ಬಿಂಬ. ಯಾವಾಗ ಈ ಬಿಂಬವು ಅಂತಃಕರಣದಲ್ಲಿ ಪ್ರತಿಬಿಂಬಿಸುವುದೋ ಆಗ ಜೀವ ಎನ್ನುವೆವು. ಜೀವ ಬ್ರಹ್ಮದ ಛಾಯೆ. ಪರಮಾರ್ಥದಲ್ಲಿ ಜೀವಚೈತನ್ಯ ಮತ್ತು ಬ್ರಹ್ಮಚೈತನ್ಯ ಅಭಿನ್ನ. ಶ್ರೀಶಾರದಾದೇವಿಯವರು ಹೇಳಿರುವರು, "ನಾನು ಎಲ್ಲಾ ಜೀವಜಂತುಗಳಲ್ಲಿಯೂ ಇದ್ದೇನೆ" ಎಂದು. ಒಮ್ಮೆ ಮಾತಿನ ಮಧ್ಯೆ ತಮ್ಮ ಸ್ವಸ್ವರೂಪವನ್ನು ಇಂಗಿತಗೊಳಿಸಿ ಹೇಳಿದರು, "ಕೊಳದಲ್ಲಿ ಚಂದ್ರನ ಪ್ರತಿಬಿಂಬವನ್ನು ನೋಡಿ, ಸಣ್ಣ ಪುಟ್ಟ ಮೀನುಗಳು, ಅದೂ ನಮ್ಮ ಹಾಗೆ ಒಬ್ಬನು ಎಂದು ತಿಳಿದು ಆನಂದದಿಂದ ಅತ್ತಿಂದಿತ್ತ ನೆಗೆದಾಡುತ್ತಾ ಆಟವಾಡುವುವು. ಆದರೆ ಚಂದ್ರನು ಅಸ್ತನಾದಾಗ ಹಿಂದಿನ ಸ್ಥಿತಿಗೇ ಬಂದು ಅವುಗಳ ಆಟವೆಲ್ಲ ಮುಗಿಯುವುದು. ಏನಾಯಿತು ಎಂದೇ ಅವುಗಳಿಗೆ ಅರ್ಥವಾಗುವುದಿಲ್ಲ." ಅಂತೆಯೇ ಜೀವಿಯು ಅಜ್ಞಾನದಿಂದ 'ನಾನು, ನನ್ನದು' ಎಂಬ ಮಮತೆಗಳನ್ನು ಹೊಂದುತ್ತಾನೆ. ಛಾಯೆಯು ಪೂರ್ಣವಲ್ಲ, ನಿಜವಲ್ಲ. ಹಾಗಾದರೆ, ಶ್ರೀರಾಮಕೃಷ್ಣರು ಅವರ ಭಾವಚಿತ್ರದಲ್ಲಿ ಇರುವರೇ ಎಂಬ ಪ್ರಶ್ನೆಗೆ ಶ್ರೀಮಾತೆಯವರು, "ಛಾಯೆ ಹಾಗೂ ಕಾಯ—ಇವು ಸಮಾನ. ಚಿತ್ರವು ಅವರ ಮತ್ತೊಂದು ರೂಪ" ಎಂದರು.

### ಯಾ ದೇವೀ ಸರ್ವಭೂತೇಷು ಶಕ್ತಿರೂಪೇಣ ಸಂಸ್ಥಿತಾ:

ಶಿವ ಮತ್ತು ಶಕ್ತಿಗಳು ಅಭೇದ. ಶಿವನ ಹೊರತು ಶಕ್ತಿಯು ಅಚಲ, ಹಾಗೂ ಶಕ್ತಿಯ ವಿನಃ ಶಿವನು ನಿಷ್ಕ್ರಿಯ. ಶಾರದಾದೇವಿಯವರು "ನಾನು ಚಿರಪುರಾತನ ಆದ್ಯಾಶಕ್ತಿ, ಜಗನ್ಮಾತೆ. ಜಗತ್ತಿಗೆ ಕೃಪೆ ಮಾಡಲೋಸುಗ ಆವಿರ್ಭೂತಳಾಗಿರುವೆನು. ಯುಗಯುಗಗಳಲ್ಲಿಯೂ ಬಂದಿರುವೆನು, ಮತ್ತೂ ಬರುವೆನು" ಎಂದು ಹೇಳಿದ್ದಾರೆ. ಶ್ರೀಮಾತೆಯವರು ಕಾಶಿಯ 'ಲಕ್ಷ್ಮೀ ನಿವಾಸ'ದಲ್ಲಿ ಇದ್ದಾಗ ಒಂದು ದಿನ ಮೇಲಿನ ವರಾಂಡದಿಂದ ಗೊಲಾಪ್‌ಮಾ ಕೆಳಗೆ ಇದ್ದ ಸ್ವಾಮಿ ಬ್ರಹ್ಮಾನಂದರನ್ನು ಉದ್ದೇಶಿಸಿ, "ರಾಖಾಲ್, ಶ್ರೀಮಾತೆಯವರು ಕೇಳುತ್ತಿರುವರು. ಶಕ್ತಿಪೂಜೆಯನ್ನು ಮೊದಲಿಗೆ ಮಾಡುವುದರ ಕಾರಣವೇನು ಎಂದು." ಅದಕ್ಕೆ ಉತ್ತರವಾಗಿ ಶ್ರೀಮಹಾರಾಜ್, "ಬ್ರಹ್ಮಾನಂದದ ಕೀಲಿ (ಬೀಗದ ಕೈ) ಇರುವುದು ಜಗಜ್ಜನನಿಯ ಕೈಯಲ್ಲಿ. ಅವಳು ಕೃಪೆಮಾಡಿ ಬಾಗಿಲನ್ನು ತೆಗೆದುಕೊಡದಿದ್ದರೆ ಬೇರೆ ಮಾರ್ಗವೇ ಇಲ್ಲ" ಎಂದು ವ್ಯಾಖ್ಯಾನಿಸಿದರು. ಒಮ್ಮೆ ಭಕ್ತನೊಬ್ಬನು ಹತಾಶನಾಗಿ ತಾನು ಅಧೋಗತಿಗೆ ಹೋಗುತ್ತಿರುವೆನೆಂದು ಪರಿತಪಿಸಿದಾಗ ಶ್ರೀಮಾತೆಯವರು, "ಏನು, ನನ್ನ ಸಂತಾನದ ಅಧಃಪತನವೇ? ಎಂದಿಗೂ ಸಾಧ್ಯವೇ ಇಲ್ಲ. ಯಾರು ನನ್ನಲ್ಲಿ ಶರಣಾಗಿರುವರೋ ಅವರಿಗೆ ಮುಕ್ತಿ ಕಟ್ಟಿಟ್ಟಬುತ್ತಿ. ಅವರನ್ನು ನರಕಕ್ಕೆ ತಳ್ಳಲು ವಿಧಿಗೂ ಸಹ ಅಸಾಧ್ಯ" ಎಂದು ಅಭಯವನ್ನಿತ್ತರು.

### ಯಾ ದೇವೀ ಸರ್ವಭೂತೇಷು ತೃಷ್ಣಾರೂಪೇಣ ಸಂಸ್ಥಿತಾ :

ತೃಷ್ಣೆ ಎಂದರೆ ಜೀವಿಗಳ ಬಾಯಾರಿಕೆ ಅಥವಾ ವಿಷಯ ತೃಷ್ಣೆ. ಜಲಕ್ಕೆ ಇನ್ನೊಂದು ಹೆಸರು ಪ್ರಾಣ. ಜಲಪಾನದಿಂದ ಪ್ರಾಣವು ಶೀತಲವಾಗುವುದು. **ಆಪಮಯೋ ಪ್ರಾಣಃ** ಎಂದು ಶಾಸ್ತ್ರದಲ್ಲಿರುವುದು. ದೇವಿಯೇ ಜೀವಿಗಳ ಹೃದಯದಲ್ಲಿನ ನಾನಾ ಬಯಕೆಗಳಾಗಿ ವಿರಾಜಿತಳಾಗಿರುವಳು. ವಾಸನಾರಹಿತನಾಗಿ ಮನುಷ್ಯನಿಗೆ ಬದುಕಲು ಸಾಧ್ಯವಿಲ್ಲ. ವಾಸನೆಗಳಲ್ಲಿ ಎರಡು ತರಹವಿರುವುದು. ಶುಭ ಮತ್ತು ಅಶುಭ ವಾಸನೆ ಎಂದು. ಅಶುಭ ಇಚ್ಛೆ ಇರುವ ಜೀವನನ್ನು ದೇವಿಯು ಸಂಸಾರದಲ್ಲಿ ಬದ್ಧನನ್ನಾಗಿ ಮಾಡುವಳು. ಅದೇ ಶುಭ ಇಚ್ಛೆ ಇರುವವರನ್ನು ಮುಕ್ತರನ್ನಾಗಿ ಮಾಡುವಳು.

ಶಾರದಾದೇವಿಯವರು ಅಧಿಕಾರಿಯ ಸಾಮರ್ಥ್ಯವನ್ನು ನೋಡಿ ಉಪದೇಶಗಳನ್ನು ನೀಡುತ್ತಿದ್ದರು. ಕೆಲವರನ್ನು ಎಲ್ಲ ಬಯಕೆಗಳನ್ನು ಹೋಗಲಾಡಿಸುವಂತೆ ಪ್ರಾರ್ಥಿಸಲು ಪ್ರಚೋದಿಸುತ್ತಿದ್ದರು. ಸಂಸಾರ ತ್ಯಾಗದ ಸಂಕಲ್ಪ ಮಾಡಿರುವವರಿಗೆ "ಸಂಸಾರದಲ್ಲಿ ಎಂತಹ ದುಃಖ. ನೀವು ನಿಶ್ಚಿಂತೆಯಾಗಿ ನಿದ್ರೆಯನ್ನಾದರೂ ಮಾಡಬಹುದು" ಎಂದು ಹೇಳುತ್ತಿದ್ದರು. ಮತ್ತೆ ಕೆಲವರು, "ಅಮ್ಮಾ, ನಾನು ವಿವಾಹವಾಗುವುದಿಲ್ಲ" ಎಂದರೆ, ಅಂತರ್ಯಾಮಿನಿಯಾದ ಜನನಿ ನಕ್ಕು, "ಅದೇಕೆ ಮಗು? ಜಗತ್ತಿನಲ್ಲಿ ಎಲ್ಲಾ ಜೋಡಿಗಳಾಗಿರುವುವು. ಎರಡು ಕಣ್ಣು, ಎರಡು ಕಿವಿ, ಕೈಕಾಲುಗಳೂ ಎರಡೆರಡು—ನೋಡಿಲ್ಲವೆ? ಹಾಗೆಯೇ ಪುರುಷ ಮತ್ತು ಪ್ರಕೃತಿಗಳು" ಎನ್ನುತ್ತಿದ್ದರು.

### ಯಾ ದೇವೀ ಸರ್ವಭೂತೇಷು ಕ್ಷಾಂತಿರೂಪೇಣ ಸಂಸ್ಥಿತಾ :

ಕ್ಷಾಂತಿ ಎಂದರೆ ಕ್ಷಮೆ, ತಿತಿಕ್ಷಾ, ಸಹಿಷ್ಣುತೆ. ಸಾಮರ್ಥ್ಯವಿದ್ದರೂ, ಅಪಕಾರಕ್ಕೆ ಪ್ರತಿಯಾಗಿ ಅಪಕಾರ ಮಾಡಲು ಇಚ್ಛೆ ಇಲ್ಲದಿರುವುದು. ದೇವಿಯು ಕ್ಷಮೆಯ ಮೂರ್ತಿಯಾಗಿರುವಳು. ಆದುದರಿಂದಲೇ ಅನಾದಿ ಕಾಲದಿಂದ ಜಗತ್ತನ್ನು ತನ್ನ ವಕ್ಷದಲ್ಲಿ ಧಾರಣೆ ಮಾಡಿರುವಳು. ದೇವಿಯ ಕೃಪೆಯಿಂದ ಮಾತ್ರ ಜೀವಿಗೆ ಯಥಾರ್ಥವಾದ ಶಾಂತಿ ಲಭಿಸುವುದು. ಶ್ರೀಮಾತೆಯವರ ಅಸಾಧಾರಣವಾದ ಕ್ಷಮಾಗುಣವನ್ನು ಕಂಡು, ಶ್ರೀರಾಮಕೃಷ್ಣರ ಆದರ್ಶ ಗೃಹೀಭಕ್ತರಾದ ಬಲರಾಮ ಬೋಸರು **ಕ್ಷಮಾರೂಪಾ ತಪಸ್ವಿನೀ** ಎಂದು ಸ್ತುತಿಸಿರುವರು. ಒಮ್ಮೆ ಸ್ವಾಮಿ ಶಾರದಾನಂದರು ಹೇಳಿದರು, 'ನಮ್ಮನ್ನು ನೋಡು, ಒಂದು ಸಣ್ಣ ವಿಷಯಕ್ಕಾದರೂ ಸಾಕು ರೇಗಿ

ಬೆಂಕಿಯಾಗುವೆವು. ಅದೇ ಶ್ರೀಮಾತೆಯನ್ನು ನೋಡು, ಎಂತಹ ಕ್ಷಮೆ! ಅವರ ತಮ್ಮಂದಿರು ಏನೆಲ್ಲಾ ಗಲಾಟೆ, ಕಿತಾಪತಿಗಳನ್ನು ಮಾಡುತ್ತಿದ್ದರೂ ಅವರು ನಿಶ್ಚಲರಾಗಿರುವರು." ರಾಧುವು ಒಮ್ಮೆ ಅತಿ ಕೋಪಿಷ್ಠಳಾಗಿ ಒಂದು ಬದನೆಕಾಯಿಯನ್ನು ಬೀಸಿ ಶ್ರೀಮಾತೆಯವರ ಬೆನ್ನಿಗೆ ಹೊಡೆದಳು. ಅವರು ನೋವಿನಿಂದ ಬಾಗಿದರು ಹಾಗೂ ಆ ಭಾಗವು ಕೆಂಪಾಯಿತು. ಆದರೆ ತಕ್ಷಣ ಅವರು ಶ್ರೀರಾಮಕೃಷ್ಣರ ಭಾವಚಿತ್ರಕ್ಕೆ ಕೈಮುಗಿದು, "ಹೇ ಠಾಕೂರ್! ಅವಳನ್ನು ಕ್ಷಮಿಸು, ಬುದ್ಧಿ ಇಲ್ಲದವಳು" ಎಂದು ಬೇಡಿದರು. ಶ್ರೀಮಾತೆಯವರು ಹೇಳುತ್ತಿದ್ದರು, "ಪೃಥ್ವಿಯ ಹಾಗೆ ನಿಮಗೆ ಸಹನೆ ಇರಬೇಕು. ಅದರ ಮೇಲೆ ಏನೆಲ್ಲಾ ಉತ್ಪಾತಗಳು, ಅನಾಚಾರಗಳು ಸಂಭವಿಸುತ್ತಿರುವುವು! ಆದರೂ ಭೂದೇವಿಯು ಎಲ್ಲವನ್ನೂ ಸಹಿಸುತ್ತಿರುವಳು. ಈ ತರಹದ ತಾಳ್ಮೆ ಮನುಷ್ಯನಾದವನಿಗೆ ಇರಬೇಕು."

## ಯಾ ದೇವೀ ಸರ್ವಭೂತೇಷು ಜಾತಿರೂಪೇಣ ಸಂಸ್ಥಿತಾ:

ಇಲ್ಲಿ ಜಾತಿಯೆಂಬ ಪದಕ್ಕೆ ಜೀವಿಯ ವಿಶೇಷತೆ ಅಥವಾ ಗುಣ ಎಂದು ತಿಳಿಯಬಹುದು. ಎಲ್ಲಿಯವರೆಗೆ ಈ ಜೀವ, ಜಗತ್ತಿರುವುದೋ ಅಲ್ಲಿಯವರೆಗೂ ಜಾತಿ ಪ್ರಭೇದಗಳು ಇರುವುವು. ದೇಶ, ಕಾಲ ಭೇದಗಳಂತೆ ಜೀವಿಗಳ ಭೇದಗಳೂ ರೂಪಾಂತರ ಹೊಂದುವುವು. ಉತ್ತಮ ವ್ಯಕ್ತಿಗಳು ಜಾತಿಯನ್ನು ಮೀರಿ ನಿಲ್ಲುವ ದೃಢದೃಷ್ಟಿಯನ್ನು ಹೊಂದಿರುತ್ತಾರೆ. ಶ್ರೀಮಾತೆಯವರು ಹೀನ ಜಾತಿಯವರ ಎಂಜಲೆಲೆ ಎತ್ತಿ ಶುಚಿ ಮಾಡುವುದನ್ನು ನೋಡಿ ನಳಿನಿ ಅಸಹ್ಯದಿಂದ "ಕಂಡಕಂಡ ಜಾತಿಯವರ ಎಂಜಲನ್ನು ಎತ್ತುವರು" ಎಂದು ಕಿರುಚಾಡಿದಳು. ಅದಕ್ಕೆ ಶ್ರೀಮಾತೆಯವರು "ಎಲ್ಲಾ ನನ್ನವರೇ. ಇನ್ನು ಬೇರೆಯವರು ಯಾರಿರುವರು?" ಎಂದರು. ಅವರು ಸರ್ವರನ್ನೂ ಮಕ್ಕಳಂತೆ ಕಾಣುತ್ತಿದ್ದರು. ಅಂತಹವರಿಗೆ ಜಾತಿ ಭೇದಗಳಿರಲು ಸಾಧ್ಯವೇ?

ದುರ್ಗಾಪೂಜೆಯ ಸಮಯದಲ್ಲಿ ಆತ್ಮೀಯರಿಗೆ ನೀಡಲು ಒಳ್ಳೆಯ ವಸ್ತ್ರಗಳನ್ನು ಕೊಂಡು ತರಲು ಸ್ವಾಮಿ ಈಶಾನಾನಂದರಿಗೆ ಶ್ರೀಮಾತೆಯವರು ಆದೇಶಿಸಿದರು. ಸ್ವಾಮಿಗಳು ವಿದೇಶಿ ಮಾಲುಗಳನ್ನು ಹೇಗೆ ತರಲಿ ಎಂದಾಗ, ಮಾತೆಯವರು ನಕ್ಕು ಹೇಳಿದರು, "ಮಗು, ವಿದೇಶೀಯರೂ ನನ್ನ ಸ್ವಂತ ಮಕ್ಕಳೇ. ಎಲ್ಲರನ್ನೂ ಸೇರಿಸಿಯೇ ನನಗೆ ಈ ಸಂಸಾರವನ್ನು ಸಾಗಿಸಬೇಕಾಗಿರುವುದು." ಮುಸಲ್ಮಾನನಾದ ಅಮ್‌ಜದ್‌ನ ವಿಷಯದಲ್ಲಿ ಅವರು "ಶರತ್ ಹೇಗೆ ನನ್ನ ಮಗನೋ ಹಾಗೆಯೇ ಅಮ್‌ಜದನೂ" ಎಂದಿರುವರು. ಹೀಗೆ ಯತಿವರ್ಯ, ಕಳ್ಳ ಎಂಬ ತಾರತಮ್ಯಗಳಿಲ್ಲದ ಜಗನ್ಮಾತೆಯಲ್ಲವೇ ಅವರು.

## ಯಾ ದೇವೀ ಸರ್ವಭೂತೇಷು ಲಜ್ಜಾರೂಪೇಣ ಸಂಸ್ಥಿತಾ:

ಲಜ್ಜಾ ಎಂದರೆ ವ್ರೀಡೆ, ನಮ್ರತೆ. ದೇವಿಯು ಜೀವಿಗಳ ಹೃದಯದಲ್ಲಿ ಲಜ್ಜಾಭಾವನೆಯ ರೂಪದಲ್ಲಿರುವುದರಿಂದಲೆ, ಹೀನ ಕೃತ್ಯಗಳನ್ನು ಮಾಡುವುದರಿಂದ ಹಿಂತೆಗೆಯುವರು. ಅವರ ಹೃದಯದಲ್ಲಿ ಈ ಭಾವನೆ ಇಲ್ಲದಿದ್ದರೆ, ಜಗತ್ತು ಪಶುಗಳ ರಾಜ್ಯವಾಗುತ್ತಿತ್ತು. ದೇವಿಯು ಕ್ಷಮಾಮೂರ್ತಿಯಾಗಿ ಜೀವಿಗಳಿಗೆ ಸ್ವೇಚ್ಛಾಚಾರಿಗಳಾಗಿ ಬದುಕುವ ಸುಯೋಗವನ್ನು ಕೊಟ್ಟಿರುವಳು. ಹಾಗೆಯೇ ಲಜ್ಜಾಮೂರ್ತಿಯಾಗಿ ಜೀವಿಗೆ ಅನಿಯಂತ್ರಿತವಾಗಿ ಜೀವಿಸದೆ ಸಂಯಮವನ್ನು ಅಭ್ಯಾಸ ಮಾಡಲು ಪ್ರಚೋದಿಸುವಳು.

ಶ್ರೀಶಾರದಾಮಾತೆ ಅತ್ಯಂತ ಲಜ್ಜಾಶೀಲೆ. ಸಾಮಾನ್ಯವಾದ ಸೆರಗಿನ ಮುಸುಕಿನಿಂದ ತಮ್ಮನ್ನು ಲೋಕದ ಕಣ್ಣಿನಿಂದ ಮರೆಮಾಚಿಟ್ಟಿದ್ದರು. ಮಾತಿನ ಮಧ್ಯದಲ್ಲೊಮ್ಮೆ ಪ್ರಸ್ತಾಪಿಸಿದರು: "ಲಕ್ಷ್ಮಿಯು ಠಾಕೂರರ ಮುಂದೆ ಕೀರ್ತನೆಗಳನ್ನು ಭಾವಾಭಿನಯ ಮಾಡಿಕೊಂಡು ನೃತ್ಯ ಮಾಡಿ ತೋರುತ್ತಿದ್ದಳು. ಠಾಕೂರರು ನನ್ನನ್ನು ಉದ್ದೇಶಿಸಿ ಹೇಳಿದರು, 'ನೋಡು, ಅದು ಅವಳ ಭಾವ, ಆದರೆ ನೀನು ಅವಳನ್ನು ಅನುಕರಿಸಿ ನಿನ್ನ ಲಜ್ಜಾಭಾವವನ್ನು ಕಳೆದುಕೊಳ್ಳಕೂಡದು' ಎಂದು."

ಒಮ್ಮೆ ಜಯರಾಂಬಾಟಿಯಲ್ಲಿ ರಾಧು, ನಳಿನಿ ಮತ್ತಿತರರು ನಾನಾ ತರಹದ ಹರಟೆಗಳನ್ನು ಹರಟುತ್ತಾ ಜೋರಾಗಿ ಗದ್ದಲ ಮಾಡುತ್ತಿದ್ದರು. ಅದನ್ನು ಕೇಳಿಸಿಕೊಂಡು ಬಂದ ಮಾತೆಯವರು ಸ್ವಲ್ಪ ಬೇಸರಿಸಿ, "ಏನಾಗಿದೆ ನಿಮಗೆ, ಸ್ವಲ್ಪ ಲಜ್ಜೆ, ಸಂಯಮ ಬೇಡವೇ? ಹೆಣ್ಣುಮಕ್ಕಳಿಗೆ ಈ ತರಹದ ಅತಿ ಹರಟೆ ಸಲ್ಲದು. ಇದು ಅತಿರೇಕವಾಯಿತು. ಹೆಂಗಸಾದವಳು ಸಂಯಮ, ಎಚ್ಚರಿಕೆಗಳಿಂದ ನಡೆಯಬೇಕು" ಎಂದಾಗ ಅಲ್ಲಿದ್ದವರಲ್ಲಿ ಒಬ್ಬರು "ಏಕೆ ಅತ್ತೆ, ಠಾಕೂರರೇ ಹೇಳಿಲ್ಲವೇ ಲಜ್ಜಾ, ಘೃಣಾ, ಭಯಗಳನ್ನು ತ್ಯಜಿಸಬೇಕು ಎಂದು" ಪ್ರಶ್ನಿಸಿದಾಗ "ಅಲ್ಲ ಅದು ಹಾಗಲ್ಲ. ಯಾರು ಭಗವತ್‌ಪ್ರೇಮದಿಂದ ಮತ್ತರಾಗಿರುವರೋ ಅಂತಹವರಿಗೆ ಅದು ಅನ್ವಯಿಸುವುದು. ನಾನು ಹೇಳುತ್ತೇನೆ ಕೇಳು, ಲಜ್ಜಾ, ಘೃಣಾ, ಭಯಗಳಿರಬೇಕು. ಅದೂ ಹೆಣ್ಣುಮಕ್ಕಳಿಗೆ ಅತ್ಯಂತ ಆವಶ್ಯಕವಾದದ್ದು. ಲಜ್ಜೆ ನಾರಿಗೆ ಭೂಷಣ. ಅದು ನಾರಿಯ ಸತೀತ್ವವನ್ನು ರಕ್ಷಿಸುವುದು. ಘೃಣಾ – ಹೇಸಿಗೆ, ಮನುಷ್ಯರೊಡನೆ ಅಲ್ಲ, ಹೀನಕೃತ್ಯಗಳನ್ನು ಮಾಡಲು ಜಿಗುಪ್ಸೆ ಇರಬೇಕು. ಹಾವಿಗೋ, ಹುಲಿಗೋ ಅಥವಾ ಮರಣಭಯವೋ ಅಲ್ಲ; ಮರ್ಯಾದೆಗಾಗಿ, ಲೋಕಾಪವಾದಕ್ಕಾಗಿ ಭಯಪಡಬೇಕು" ಎನ್ನುತ್ತಾ, "ಭಯವಿದ್ದಲ್ಲಿ ಜಯವಿರುವುದು" ಎಂಬ ಅಮೂಲ್ಯವಾದ ಉಪದೇಶವಿತ್ತರು.

(ಮುಂದುವರಿಯುವುದು)